**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ43/2022 ಡಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **20.01.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ **ಎಂ.ಎಚ್.ಎಸ್** ವಕೀಲರಿಂದಃ

ನಾನು **B.A** ಪದವೀವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ.

1 ನೇ ವಾದಿಯು ನನ್ನ ಚಿಕ್ಕಮ್ಮ ಆಗಿರುತ್ತಾರೆ. ಸದರಿಯವರಿಗೆ ಮೂರು ಜನ ಹೆಣ್ಣು ಮಕ್ಕಳಿದ್ದು, ಸದರಿಯವರು 2 ರಿಂದ 4 ನೇ ವಾದಿಗಳು ಆಗಿರುತ್ತಾರೆ ಎಂದರೆ ಸರಿ. 1 ನೇ ವಾದಿಯ ಗಂಡ ಲೊಕೇಶಮೂರ್ತಿರವರು ತೀರಿಕೊಂಡಿರುತ್ತಾರೆ ಎಂದರೆ ಸರಿ.

ವಾದಿಗಳು ಯಾರ ಯಾರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ವಾದಿಯು ನನ್ನ, ಆನಂದ, ಮಹೇಶ ಮತ್ತು ನಾಗರಾಜುರವರ ವಿರುದ್ಧ ಈ ದಾವೆಯನ್ನು ಹಾಕಿರುತ್ತಾರೆ. ವಾದಿಗಳು ನಮ್ಮ ಮನೆಯ ಹಿತ್ತಲು ಹಾಗೂ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಹಾಕಿರುತ್ತಾರೆ. ದಾವಾ ಆಸ್ತಿಯ ಗ್ರಾಮ ಪಂಚಾಯತಿಗೆ ಒಳಪಟ್ಟಿರುತ್ತದೆ. ಸದರಿ ಆಸ್ತಿಯ ಜಂಜರ ನಂ.153 ಮತ್ತು 154 ಆಗಿರುತ್ತದೆ, ವಿಸ್ತೀರ್ಣ ಪೂರ್ವ-ಪಶ್ಚಿಮ 27 ಅಡಿ, ಉತ್ತರ-ದಕ್ಷಿಣ 135 ಅಡಿ ಇರುತ್ತದೆ.

ದಾವಾ ವಾದಪತ್ರದ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ವಾದಿಗಳು ಪಿತ್ರಾರ್ಜಿತ ಆಸ್ತಿ ಮೇರೆಗೆ ತಮಗೂ ಭಾಗ ಬರಬೇಕೆಂದು ಈ ದಾವೆಯನ್ನು ಹಾಕಿರುತ್ತಾರೆ. ದಾವಾ ಆಸ್ತಿ ಚೆಕ್ಕುಬಂಧಿ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು ಸೀಹಳ್ಳಿ ಗ್ರಾಮಕ್ಕೆ ಸೇರಿರುತ್ತದೆ. ಈ ದಾವೆಯಲ್ಲಿ ನಾವು ಸಲ್ಲಿಸಿದ ಪ್ರತಿವಾದಪತ್ರದ ಅಂಶಗಳು ನನಗೆ ತಿಳಿದಿರುತ್ತವೆ. ಸದರಿ ಪ್ರತಿವಾದಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ಪ್ರತಿವಾದಪತ್ರ ತಯಾರಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ.

ನಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯ ಪೂರ್ವಕ್ಕೆ ಕಾಳಮಾದಪ್ಪರವರ ಮನೆ ಹಿತ್ತಲು ಮತ್ತು ಖಾಲಿ ನಿವೇಶನ, ಪಶ್ಚಿಮಕ್ಕೆ ಹಾಲಿ ದೇವಪ್ಪರವರಿಂದ ಲೊಕೇಶಮೂರ್ತಿ ರವರು ಖರೀದಿ ಮಾಡಿರುವ ಮನೆ ಮತ್ತು ಖಾಲಿ ನಿವೇಶನ ಹಾಗೂ ಹಿತ್ತಲು, ಉತ್ತರಕ್ಕೆ ಲೊಕೇಶಮೂರ್ತಿ ರವರ ಮನೆ, ದಕ್ಷಿಣಕ್ಕೆ ಮಾದಶೆಟ್ಟಿ, ಕೃಷ್ಣಶೆಟ್ಟಿ ಮತ್ತು ನಂಜಶೆಟ್ಟಿರವರ ಜಮೀನು ಇರುತ್ತದೆ. ಪಿತ್ರಾರ್ಜಿತವಾಗಿ ಬಂದ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 27 ಅಡಿ, ಉತ್ತರ ದಕ್ಷಿಣ 135 ಅಡಿ ಇದ್ದು ಅದರಲ್ಲಿ ಉತ್ತರ ಭಾಗಕ್ಕೆ ಪೂರ್ವ ಪಶ್ಚಿಮ 25 ಅಡಿ, ಉತ್ತರ ದಕ್ಷಿಣ 50 ಅಡಿ ವಿಸ್ತೀರ್ಣದ ಮನೆ ಇರುತ್ತದೆ, ಸಾಕ್ಷಿ ಮುಂದುವರಿದು ಮನೆಯ ದಕ್ಷಿಣ ಭಾಗಕ್ಕೆ ಪೂರ್ವ ಪಶ್ಚಿಮ 13 ½ ಅಡಿ, ಉತ್ತರ ದಕ್ಷಿಣ 85 ಅಡಿ ಖಾಲಿ ನಿವೇಶನ ಹಾಗೂ ಹಿತ್ತರಲು ಇರುತ್ತದೆ ಎಂದು ನುಡಿಯುತ್ತಾರೆ. ಉಳಿದ 13 ½ ಅಡಿ **X** 4 ಅಡಿ ಜಾಗವನ್ನು ಓಡಾಡಲು ಉಪಯೋಗಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ಉತ್ತರದ ಕಡೆಗೆ ಬಂಡಿ ಬೀದಿ ಇರುವ ದಕ್ಷಿಣದ ಕಡೆ ಇರುವ 4 ಕಂಬದ ತೊಟ್ಟಿ ಮನೆ ನನ್ನ ಚಿಕ್ಕಪ್ಪ ಲೊಕೇಶಮೂರ್ತಿರವರಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಮನೆಯ ದಕ್ಷಿಣ ದಿಕ್ಕಿಗೆ ನನ್ನ ತಂದೆಗೆ ಪ್ರಕಾಶಮೂರ್ತಿರವರಿಗೆ ಮನೆ ಇರುತ್ತದೆ ಎಂದರೆ ಸರಿ. ಸದರಿ ನಮ್ಮ ಮನೆಯ ದಕ್ಷಿಣ ದಿಕ್ಕಿನಲ್ಲಿ ಇರುವ ಆಸ್ತಿಯಲ್ಲಿ ಪಶ್ಚಿಮ ಭಾಗದ 13 ½ **X** 85 ಅಡಿ ಜಾಗ ನಮ್ಮ ತಂದೆಗೆ ಹಾಗೂ ಪೂರ್ವ ಭಾಗದ 13 ½ **X** 85 ಅಡಿ ಜಾಗ ಲೊಕೇಶಮೂರ್ತಿರವರಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು 13 ½ **X** 79 ಅಡಿ ಜಾಗ ಮಾತ್ರ ಇದ್ದು, ಉಳಿದ ಜಾಗ ನಮಗೆ ಓಡಾಡಲು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಎಲ್ಲಾ ಆಸ್ತಿಗಳ ಪೂರ್ವ ದಿಕ್ಕಿಗೆ ಕಾಳಮಾದಪ್ಪ ರವರ ಮನೆ ಹಾಗೂ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿ.

ಕಾಳಮಾದಪ್ಪರವರಿಗೆ ಮೂರು ಜನ ಮಕ್ಕಳು ಎಂದರೆ ಸರಿ, ಸದರಿಯವರ ಹೆಸರು ಮಹದೇವಪ್ಪ, ಶಿವಸ್ವಾಮಿ ಮತ್ತು ಬಸವಣ್ಣ ಎಂದರೆ ಸರಿ. ಸದರಿ ಮಹದೇವಪ್ಪ ರವರ ಮಗನ ಹೆಸರು ನಾಗರಾಜು ಎಂದು ಇರುತ್ತದೆ. ಬಸವಣ್ಣರವರ ಮಗನ ಹೆಸರು ನಟರಾಜು ಎಂದು ಇರುತ್ತದೆ ಹಾಗೂ ಶಿವಸ್ವಾಮಿ ರವರ ಮಗನ ಹೆಸರು ಮಹೇಶ ಎಂದು ಇರುತ್ತದೆ.

**1** ರಿಂದ **3** ನೇ ಪ್ರತಿವಾದಿಗಳ ಮನೆಯ ಉತ್ತರ ದಿಕ್ಕಿಗೆ ಸರ್ಕಾರಿ ಮಾರಿಗುಡಿ ಜಾಗ ಹಾಗೂ ನೀರಿನ ಟ್ಯಾಂಕ ಇರುತ್ತದೆ. ಸದರಿ ಮಾರಿಗುಡಿ ಜಾಗ ಹಾಗೂ ನೀರಿನ ಟ್ಯಾಂಕನ ಉತ್ತರ ದಿಕ್ಕಿನಲ್ಲಿ ಬಂಡಿಬೀದಿ ಇರುತ್ತದೆ ಎಂದರೆ ಸರಿ. ಮಹದೇವಪ್ಪ, ಬಸವಣ್ಣ ಮತ್ತು ಶಿವಸ್ವಾಮಿರವರ ಮನೆಯ ದಕ್ಷಿಣ ದಿಕ್ಕಿನಲ್ಲಿ ಖಾಲಿ ಜಾಗ ಅಂದರೆ ಹಿತ್ತಲು ಇರುತ್ತದೆ. ನಮ್ಮ ಮನೆಯ ಪೂರ್ವ ದಿಕ್ಕಿನಲ್ಲಿ ನಮಗೆ ಸೇರಿದ **4** ಅಡಿ ಓಡಾಡುವ ಖಾಲಿ ಜಾಗ ಹಾಗೂ ತದನಂತರ **3** ನೇ ಪ್ರತಿವಾದಿಯ ಮನೆ ಇರುತ್ತದೆ. **3** ನೇ ಪ್ರತಿವಾದಿಯ ಮನೆಯ ಪೂರ್ವ ದಿಕ್ಕಿನಲ್ಲಿ **2** ನೇ ಪ್ರತಿವಾದಿಯ ಮನೆ ಇರುತ್ತದೆ. **2** ನೇ ಪ್ರತಿವಾದಿಯ ಮನೆಯ ಪೂರ್ವ ದಿಕ್ಕಿನಲ್ಲಿ **1** ನೇ ಪ್ರತಿವಾದಿಯ ಮನೆ ಇರುತ್ತದೆ ಎಂದರೆ ಸಾಕ್ಷಿಯು ದಕ್ಷಿಣ ದಿಕ್ಕಿನಲ್ಲಿ ತೊಟ್ಟಿ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಕಾಳಮಾದಪ್ಪರವರ ಮಕ್ಕಳ ಮನೆಯ ದಕ್ಷಿಣ ದಿಕ್ಕಿನಲ್ಲಿ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ಲೊಕೇಶಮೂರ್ತಿ, ಪ್ರಕಾಶಮೂರ್ತಿ ಮತ್ತು ಪ್ರಕಾಶಮೂರ್ತಿರವರ ದಕ್ಷಿಣ ದಿಕ್ಕಿನ ನಿವೇಶನ ಪಶ್ಚಿಮ ಭಾಗಕ್ಕೆ ಹೊನ್ನಪ್ಪ ದೇವಪ್ಪರವರಿಂದ ಖರೀದಿ ಮಾಡಿದ ಲೊಕೇಶಮೂರ್ತಿರವರ ಮನೆ ಹಾಗೂ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ಸದರಿ ಮನೆ ಹಾಗೂ ಖಾಲಿ ಜಾಗದ ಪಶ್ಚಿಮ ದಿಕ್ಕಿನಲ್ಲಿ ಕಾಳಪ್ಪರವರ ಮನೆ ಮತ್ತು ನಿವೇಶನ ಇರುತ್ತದೆ ಎಂದರೆ ಸರಿ. ಮೇಲೆ ತಿಳಿಸಿದ ಎಲ್ಲಾ ಆಸ್ತಿಗಳು ಸೀಹಳ್ಳಿ ಗ್ರಾಮ ಠಾಣಾ ವ್ಯಾಪ್ತಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ಸದರಿ ಎಲ್ಲಾ ಆಸ್ತಿಗಳ ದಕ್ಷಿಣ ದಿಕ್ಕಿಗೆ ಸರ್ವೇ ನಂಬರ ಆಸ್ತಿ ಇದ್ದು, ಅದು ಕನ್ನಳ್ಳಿ ಗ್ರಾಮಕ್ಕೆ ಸೇರಿರುತ್ತದೆ ಎಂದರೆ ಸಾಕ್ಷಿಯು ದಕ್ಷಿಣ ದಿಕ್ಕಿನಲ್ಲಿ ಮಾದಶೆಟ್ಟಿ, ಕೃಷ್ಣಶೆಟ್ಟಿ ಹಾಗೂ ನಂಜಶೆಟ್ಟಿರವರ ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿಯವರಿಗೆ ಸೇರಿದ ಜಮೀನುಗಳು ಕನ್ನಳ್ಳಿ ಗ್ರಾಮಕ್ಕೆ ಸೇರಿರುತ್ತವೆ. ಸದರಿ ಜಮೀನುಗಳ ಸರ್ವೇ ನಂಬರ ಹಾಗೂ ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ವಾದಿ ಪರ ಶ್ರೀ **ಎಂ.ಎಚ್.ಎಸ್** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**